**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೈದನೆಯ ಅಧಿವೇಶನ'**

# ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–01)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ನ್ನು (1966ರ ಕರ್ನಾಟಕ ಅಧಿನಿಯಮ 27) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ (1966ರ ಕರ್ನಾಟಕ ಅಧಿನಿಯಮ ಸಂಖ್ಯೆ 27) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(i) (13)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"(13ಎ) "ಇ-ಕಾಮರ್ಸ್ ವೇದಿಕೆ"** ಎಂದರೆ ಸ್ಥಳೀಯ ಬಳಕೆಗಾಗಿ ಬಳಕೆದಾರರಿಗೆ ಮಾರಾಟ ಮಾಡಲು ತರುವಾಯದ ಮಾರಾಟಕ್ಕಲ್ಲದ ಮತ್ತು ಮಾರುಕಟ್ಟೆ ಪ್ರದೇಶದಲ್ಲಿ ಲೈಸೆನ್ಸ್‌ಯುಕ್ತ ಚಿಲ್ಲರೆ ವ್ಯಾಪಾರಿಗೆ ಮಾರುಕಟ್ಟೆ ಶುಲ್ಕ ಬಾಧಿತ ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ಈ ಅಧಿನಿಯಮದಡಿ ಲೈಸೆನ್ಸ್‌ಯುಕ್ತ ಮಾರಾಟಗಾರರಿಗೆ ಅನುವು ಮಾಡಿಕೊಡಲು ಇರುವ ಆನ್‌ಲೈನ್ ವೇದಿಕೆ ಹಾಗೂ ಇ-ಪಾವತಿ ವಿಧಾನವನ್ನು ಬಳಸುವ ಮೂಲಕ ಪಾವತಿ ಮಾಡಲು ರೈತರಿಗಾಗಿ ಇರುವ ಆನ್‌ಲೈನ್ ವೇದಿಕೆ".

(ii) (21)ನೇ ಖಂಡದಲ್ಲಿ "ವ್ಯಾಪಾರಿ" ಎಂಬ ಪದದ ತರುವಾಯ "ಉಗ್ರಾಣ ಸೇವಾದಾತ" ಎಂಬ ಆವರಣ ಚಿಹ್ನೆ ಮತ್ತು ಪದಗಳನ್ನು ಸೇರಿಸತಕ್ಕದ್ದು;

(iii) (37ಎ) ಖಂಡದಲ್ಲಿ "ನಿರ್ದಿಷ್ಟಪಡಿಸಬಹುದಾದ ಪ್ರಮಾಣವನ್ನು ಮೀರದಂತೆ" ಎಂಬ ಪದದ ತರುವಾಯ "ಮತ್ತು ಆ ಉದ್ದೇಶಕ್ಕಾಗಿ ಚಿಲ್ಲರೆ ವ್ಯಾಪಾರಿಯೆಂದು ವರ್ಗೀಕರಿಸಿದ" ಎಂಬ ಪದಗಳನ್ನು ಸೇರಿಸತಕ್ಕದ್ದು;

(iv) (50)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"(50ಎ) "ಉಗ್ರಾಣ ಸೇವಾದಾತ"** ಎಂದರೆ ಅಧಿಸೂಚಿತ ಉಗ್ರಾಣದಲ್ಲಿ ಅಧಿಸೂಚಿತ ಕೃಷಿ ಉತ್ಪನ್ನವನ್ನು ಖರೀದಿಸಲು ಮತ್ತು ಮಾರಾಟ ಮಾಡುವುದಕ್ಕಾಗಿ ಸೇವೆಗಳನ್ನು ನೀಡುವ ಅಥವಾ ಒದಗಿಸುವ ಮತ್ತು ಅದಕ್ಕಾಗಿ ಬಳಕೆದಾರ ಶುಲ್ಕವನ್ನು ಸಂಗ್ರಹಿಸುವ ವ್ಯಕ್ತಿ, ಫರ್ಮು, ಕಂಪನಿ."

**3. 6ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 6ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ,-

(i) ಮೂರನೇ ಪರಂತುಕದ ಬದಲಿಗೆ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೆ ಪರಂತು, ಕೃಷಿ ಮಾರುಕಟ್ಟೆ ನಿರ್ದೇಶಕನು ಉಗ್ರಾಣ, ಹಗೇವು, ಶೀತಲ ಸಂಗ್ರಹ, ಪ್ಯಾಕ್ ಹೌಸ್‌ಗಳು, ಶುಚಿಮಾಡುವ, ಶ್ರೇಣೀಕರಿಸುವ ಮತ್ತು ಪ್ಯಾಕ್ ಮಾಡುವ ಘಟಕವನ್ನು ಉಪ-ಮಾರುಕಟ್ಟೆ, ಮಾರುಕಟ್ಟೆಯ ಉಪ-ಪ್ರಾಂಗಣ ಅಥವಾ ಸಂದರ್ಭಾನುಸಾರ ಉಪ-ಮಾರುಕಟ್ಟೆ ಪ್ರಾಂಗಣದಂತೆ ನಿಯಮಿಸಬಹುದಾದಂಥ ವಿಧಾನದಲ್ಲಿ ಘೋಷಿಸಬಹುದು."

(ii) ಹಾಗೆ ತಿದ್ದುಪಡಿಮಾಡಲಾದ ಮೂರನೇ ಪರಂತುಕದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೇ ಪರಂತು, ಮಾರುಕಟ್ಟೆ ಪ್ರಾಂಗಣದ ಹೊರಗಿನ ಮತ್ತು ಮಾರುಕಟ್ಟೆ ಪ್ರದೇಶದ ಒಳಗಿರುವ ಮಾರುಕಟ್ಟೆ ಸಮಿತಿಯಿಂದ ಲೈಸೆನ್ಸ್ ಹೊಂದಿರುವ ಎಲ್ಲಾ ಸಂಸ್ಕರಣಾ ಘಟಕಗಳನ್ನು ನಿಯಂತ್ರಣದ ಉದ್ದೇಶಕ್ಕಾಗಿ ಉಪ-ಮಾರುಕಟ್ಟೆ, ಮಾರುಕಟ್ಟೆಯ ಉಪ-ಪ್ರಾಂಗಣ ಅಥವಾ ಸಂದರ್ಭಾನುಸಾರ ಉಪ-ಮಾರುಕಟ್ಟೆ ಪ್ರಾಂಗಣದಂತೆ ಭಾವಿಸತಕ್ಕದ್ದು."

**4. ಹೊಸ ಪ್ರಕರಣ 78-ಬಿ ಸೇರ್ಪಡೆ.-** ಮೂಲ ಅಧಿನಿಯಮದ 78ಎ ಪ್ರಕರಣದ ತರುವಾಯ ಈ ಮುಂದಿನ ಹೊಸಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"**78-ಬಿ. ಉಗ್ರಾಣ ಸೇವಾದಾತನ ಹೊಣೆಗಾರಿಕೆ.-** (1) ಉಗ್ರಾಣ ಸೇವಾದಾತನು ಅಧಿಸೂಚಿತ ಕೃಷಿ ಉತ್ಪನ್ನವಾದ ಹಣ್ಣುಗಳು, ತರಕಾರಿಗಳು, ಹೂವುಗಳ ಸಂಬಂಧದಲ್ಲಿ ಮಾರಾಟವಾದಂಥ ಅಧಿಸೂಚಿತ ಕೃಷಿ ಉತ್ಪನ್ನಗಳಿಗಾಗಿ ಬೆಲೆಯ ಶೇಕಡಾ ಐದಕ್ಕೆ ಮೀರದಷ್ಟು ಮತ್ತು ಎಲ್ಲಾ ಇತರ ಅಧಿಸೂಚಿತ ಉತ್ಪನ್ನಕ್ಕೆ ಶೇಕಡಾ ಎರಡರಷ್ಟು ಮಾತ್ರ ಖರೀದಿದಾರನಿಂದ ತನ್ನ ಸೇವಾ ಶುಲ್ಕವನ್ನು ಪಡೆಯತಕ್ಕದ್ದು.

(2) ಉಗ್ರಾಣ ಸೇವಾದಾತನು,-

(i) ಮಾರಾಟಗಾರನ ಸರಕಿನ ಸುರಕ್ಷಿತ ಅಭಿರಕ್ಷೆ ಮತ್ತು ಅಧಿಸೂಚಿತ ಕೃಷಿ ಉತ್ಪನ್ನದ ದಾಸ್ತಾನು ಹಾಗೂ ಬೆಂಕಿ, ಕಳ್ಳತನ, ಪ್ರವಾಹ, ಮಳೆ ಅಥವಾ ಯಾವುದೇ ಇತರ ನೈಸರ್ಗಿಕ ವಿಪತ್ತುಗಳ ಪ್ರತಿಯಾಗಿ ಸೂಕ್ತ ವಿಮೆಯ ವ್ಯವಸ್ಥೆ ಮಾಡತಕ್ಕದ್ದು;

(ii) ಅಗ್ನಿಶಾಮಕ ವ್ಯವಸ್ಥೆಗಳು, ಎಲೆಕ್ಟ್ರಾನಿಕ್ ತೂಕಹಾಕುವಿಕೆ ಮತ್ತು ಇ-ವಾಣಿಜ್ಯ ಸೌಕರ್ಯಗಳು, ಬೆಲೆ ನಿರ್ಧರಣೆ ಸೌಕರ್ಯಗಳು, ಗುಣಮಟ್ಟದ ಪ್ರಮಾಣೀಕರಣ, ಮಾರುಕಟ್ಟೆಯಲ್ಲಿನ ಸರಕುಗಳ ಬೆಲೆಗಳ ಪ್ರದರ್ಶನ ಹಾಗೂ ಕೃಷಿ ಮಾರುಕಟ್ಟೆ ನಿರ್ದೇಶಕನು ಅಧಿಸೂಚಿಸಿದಂತೆ ಒದಗಿಸಬೇಕಾದ ಇತರ ಸೌಕರ್ಯಗಳನ್ನು ಕಲ್ಪಿಸತಕ್ಕದ್ದು; ಮತ್ತು

(iii) ಉಗ್ರಾಣ ಸೇವಾದಾತನು ಅಡಮಾನ ಸಾಲ ಸೌಕರ್ಯದ ವ್ಯವಸ್ಥೆಗಳನ್ನು ಮಾಡತಕ್ಕದ್ದು.

(3) ಅಧಿನಿಯಮದ 78ನೇ ಪ್ರಕರಣದಡಿ ಬೆಲೆ ಪಾವತಿಯನ್ನು ಮಾಡದೇ ಇರುವ ಸಂದರ್ಭದಲ್ಲಿ, ಉಗ್ರಾಣದ ಸೇವಾದಾತನು ಐದು ದಿನಗಳೊಳಗಾಗಿ ಮಾರಾಟಗಾರನಿಗೆ ಅಧಿಸೂಚಿತ ಕೃಷಿ ಉತ್ಪನ್ನಕ್ಕೆ ಪಾವತಿಸಬೇಕಾದ ಒಟ್ಟು ಬೆಲೆಗೆ ಪ್ರತಿ ದಿನಕ್ಕೆ ಶೇಕಡಾ ಒಂದರಷ್ಟರ ದರದಲ್ಲಿ ಹೆಚ್ಚುವರಿ ಪಾವತಿ ಮಾಡಲು ಹೊಣೆಗಾರನಾಗತಕ್ಕದ್ದು, ತಪ್ಪಿದಲ್ಲಿ, ಉಗ್ರಾಣ ಆಧಾರಿತ ಮಾರಾಟಗಳ ಉದ್ದೇಶಕ್ಕಾಗಿನ ಉಗ್ರಾಣ ಘೋಷಣೆಯು ರದ್ದುಗೊಳ್ಳತಕ್ಕದ್ದು."

**5. ಹೊಸ ಅಧ್ಯಾಯ XIII-ಡಿ ಸೇರ್ಪಡೆ.-** ಮೂಲ ಅಧಿನಿಯಮದ XIII-ಸಿ ಅಧ್ಯಾಯದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

## ಅಧ್ಯಾಯ XIII-ಡಿ

## ಇ-ವಾಣಿಜ್ಯ ವೇದಿಕೆ

**131ಕೆ. ಇ-ವಾಣಿಜ್ಯ ವೇದಿಕೆಯ ಸ್ಥಾಪನೆ.-** (1) ಯಾರೇ ವ್ಯಕ್ತಿಯು ಈ ಪ್ರಕರಣದಡಿ ಲೈಸೆನ್ಸ್ ಪಡೆಯದ ಹೊರತು ಅಧಿಸೂಚಿತ ಕೃಷಿ ಉತ್ಪನ್ನದ ವ್ಯಾಪಾರಕ್ಕಾಗಿ ಇ-ವಾಣಿಜ್ಯ ವೇದಿಕೆಯನ್ನು ಸ್ಥಾಪಿಸತಕ್ಕದ್ದಲ್ಲ ಮತ್ತು ನಡೆಸತಕ್ಕದ್ದಲ್ಲ.

(2) ಕೃಷಿ ಮಾರುಕಟ್ಟೆ ನಿರ್ದೇಶಕನು, ನಿಯಮಿಸಬಹುದಾದ ಅಂಥ ಷರತ್ತುಗಳು ಮತ್ತು ಅಂಥ ಶುಲ್ಕಗಳು ಮತ್ತು ಅಂಥ ಭದ್ರತಾ ಠೇವಣಿಗೆ ಒಳಪಟ್ಟು, ಅಧಿಸೂಚಿತ ಕೃಷಿ ಉತ್ಪನ್ನದ ವ್ಯಾಪಾರವನ್ನು ಸುಗಮಗೊಳಿಸಲು ಇ-ವಾಣಿಜ್ಯ ವೇದಿಕೆಯನ್ನು ರಚಿಸುವುದಕ್ಕಾಗಿ ಲೈಸೆನ್ಸನ್ನು ಮಂಜೂರು ಮಾಡತಕ್ಕದ್ದು.

(3) ಇ-ವಾಣಿಜ್ಯ ವೇದಿಕೆಯನ್ನು ಸ್ಥಾಪಿಸಲು ಮತ್ತು ನಡೆಸಲು ಬಯಸುವ ಯಾರೇ ವ್ಯಕ್ತಿಯು ಕೃಷಿ ಮಾರುಕಟ್ಟೆ ನಿರ್ದೇಶಕನಿಗೆ ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಅಂಥ ಶುಲ್ಕ ಮತ್ತು ಭದ್ರತಾ ಠೇವಣಿಯೊಂದಿಗೆ ಅರ್ಜಿಯನ್ನು ಸಲ್ಲಿಸಬಹುದು.

(4) ಇ-ವಾಣಿಜ್ಯ ವೇದಿಕೆಯು,-

(i) ವೇದಿಕೆಯಲ್ಲಿ ವ್ಯಾಪಾರಿಗಳು ಅಧಿಸೂಚಿತ ಕೃಷಿ ಉತ್ಪನ್ನಗಳ ವ್ಯಾಪಾರಕ್ಕಾಗಿ ಪಾವತಿ ಸೌಕರ್ಯವನ್ನು ಕಲ್ಪಿಸತಕ್ಕದ್ದು.

(ii) ಇ-ವಾಣಿಜ್ಯ ವೇದಿಕೆಯಲ್ಲಿ ನೋಂದಾಯಿಸಲು ಈ ಅಧಿನಿಯಮದಡಿ ಯುಕ್ತ ಪ್ರಾಧಿಕಾರವು ಲೈಸೆನ್ಸು ನೀಡಿದ ಲೈಸೆನ್ಸ್‌ಯುಕ್ತ ವ್ಯಾಪಾರಿಗಳನ್ನು ಮಾತ್ರ ಅನುಮತಿಸತಕ್ಕದ್ದು.

(iii) ವೇದಿಕೆಯಲ್ಲಿ ನಡೆಯಲಾಗುವ ಸಂಪೂರ್ಣ ವ್ಯಾಪಾರ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ಕಾರ್ಯಚಟುವಟಿಕೆ, ತೀರ್ಮಾನ ಕೈಗೊಳ್ಳುವುದರಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸತಕ್ಕದ್ದು;

(iv) ವೇದಿಕೆಯಲ್ಲಿ ನಡೆಸಲಾಗುವ ನೋಂದಣಿ, ವ್ಯಾಪಾರ ವಹಿವಾಟುಗಳಿಗೆ ಸಂಬಂಧಿಸಿದ ಶುಲ್ಕಗಳು, ಚಾರ್ಜುಗಳು ಇತ್ಯಾದಿಗಳನ್ನು ಸಂಗ್ರಹಿಸಲು ಉಪಬಂಧ ಕಲ್ಪಿಸತಕ್ಕದ್ದು.

(v) ವೇದಿಕೆಯಲ್ಲಿ ವ್ಯವಹರಿಸಲಾದ ಎಲ್ಲಾ ವಹಿವಾಟುಗಳ ದಾಖಲೆಗಳನ್ನು ವಿದ್ಯುನ್ಮಾನ ನಮೂನೆಯಲ್ಲಿ ನಿರ್ವಹಿಸತಕ್ಕದ್ದು;

(vi) ಶ್ರೇಣೀಕರಣ, ಗುಣಮಟ್ಟ ಪ್ರಮಾಣೀಕರಣ ಮತ್ತು ಸರಕುಗಳ ಪ್ರಮಾಣ ನಿಷ್ಕರ್ಷೆ, ಪೂರಕ ಹಣಕಾಸು ನೀಡಿಕೆ, ಸಾಲ ನೀಡಿಕೆ ಹಾಗೂ ವೇದಿಕೆಯಲ್ಲಿ ಭಾಗವಹಿಸುವವರು ಅಗತ್ಯಪಡಿಸಿದ ಇತರ ಸೇವೆಗಳು;

(vii) ಲೈಸೆನ್ಸ್‌ಯುಕ್ತ ವ್ಯಾಪಾರಿಗಳು ಮಾರಾಟ ಮಾಡಲು ನೀಡಿದ ಮಾರುಕಟ್ಟೆ ಶುಲ್ಕ ಬಾಧಿತ ಸರಕುಗಳನ್ನು ಮಾತ್ರ ವ್ಯಾಪಾರಮಾಡತಕ್ಕದ್ದು ಹಾಗೂ ಮೇಲಿನದಕ್ಕೆ ತದ್ವಿರುದ್ಧವಾದ ಸಂದರ್ಭದಲ್ಲಿ ಸಂಬಂಧಪಟ್ಟ ಮಾರುಕಟ್ಟೆ ಸಮಿತಿಗೆ ಅನ್ವಯವಾಗುವ ಮಾರುಕಟ್ಟೆ ಶುಲ್ಕವನ್ನು ವೇದಿಕೆಯ ಲೈಸೆನ್ಸುದಾರನ್ನು ಸಂದಾಯಮಾಡತಕ್ಕದ್ದು; ಮತ್ತು

(viii) ಲೈಸೆನ್ಸು ನೀಡಿಕೆ ಪ್ರಾಧಿಕಾರಿಗೆ ಕಾರ್ಯಾಚರಣೆ ಮತ್ತು ಕಾರ್ಯನಿರ್ವಹಣೆ ಮಾರ್ಗಸೂಚಿಗಳನ್ನು ಒದಗಿಸತಕ್ಕದ್ದು ಹಾಗೂ ಅದನ್ನು ಅನುಮತಿಸಿದ ತರುವಾಯ, ತದನುಸಾರ ವೇದಿಕೆಯು ಕಾರ್ಯಾಚರಣೆ ನಡೆಸತಕ್ಕದ್ದು.

**131ಎಲ್. ಇ-ವಾಣಿಜ್ಯ ವೇದಿಕೆ ಲೈಸೆನ್ಸಿನ ವರದಿಗಳು.-** ಲೈಸೆನ್ಸುದಾರನು ಇ-ವಾಣಿಜ್ಯ ವೇದಿಕೆಯಲ್ಲಿ ನಡೆಯುವ ಎಲ್ಲಾ ವಹಿವಾಟುಗಳ ದಾಖಲೆಯನ್ನು ವಿದ್ಯುನ್ಮಾನ ನಮೂನೆಯಲ್ಲಿ ನಿರ್ವಹಿಸತಕ್ಕದ್ದು ಮತ್ತು ಕೃಷಿ ಮಾರುಕಟ್ಟೆ ನಿರ್ದೇಶಕನು ನಿರ್ದಿಷ್ಟಪಡಿಸಿದಂತೆ, ಕಾಲಕಾಲಕ್ಕೆ ಅಂಥ ನಿಯತಕಾಲಿಕ ವರದಿಗಳನ್ನು ಮತ್ತು ವಿವರಪಟ್ಟಿಕೆಗಳನ್ನು ಅಂಥ ಸಮಯಗಳಲ್ಲಿ ಹಾಗೂ

ಅಂಥ ನಮೂನೆಗಳಲ್ಲಿ ಲೇಸೆನ್ಸು ನೀಡುವ ಪ್ರಾಧಿಕಾರಕ್ಕೆ ಅಥವಾ ಈ ಕುರಿತು ಆತನ ಮೂಲಕ ಅಧಿಕೃತಗೊಳಿಸಲಾದ ಯಾರೇ ಅಧಿಕಾರಿಗೆ ಸಲ್ಲಿಸತಕ್ಕದ್ದು.

**131ಎಂ. ಇ-ವಾಣಿಜ್ಯ ಲೈಸೆನ್ಸನ್ನು ರದ್ದುಪಡಿಸುವ ಅಥವಾ ಅಮಾನತ್ತುಗೊಳಿಸುವ ಅಧಿಕಾರ.-** ಕೃಷಿ ಮಾರುಕಟ್ಟೆ ನಿರ್ದೇಶಕನು ಈ ಮುಂದಿನ ಸನ್ನಿವೇಶಗಳಲ್ಲಿ, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಆತನ ಮೂಲಕ ಮಂಜೂರು ಮಾಡಲಾದ ಇ-ವಾಣಿಜ್ಯ ವೇದಿಕೆ ಲೈಸೆನ್ಸನ್ನು ಅಮಾನತ್ತುಪಡಿಸುವುದು ಅಥವಾ ರದ್ದುಪಡಿಸುವುದು, ಎಂದರೆ:-

(i) ಉದ್ದೇಶಪೂರ್ವಕ ತಪ್ಪು ನಿರೂಪಣೆ ಅಥವಾ ವಂಚನೆಯ ಮೂಲಕ ಲೈಸೆನ್ಸನ್ನು ಪಡೆಯಲಾಗಿದ್ದರೆ;

(ii) ಲೈಸೆನ್ಸು ಹೊಂದಿದವನು ಅಥವಾ ಆತನ ಪರವಾಗಿ ಕಾರ್ಯನಿರ್ವಹಿಸುತ್ತಿರುವ ಯಾರೊಬ್ಬರು ಆತನ ವ್ಯಕ್ತ ಅಥವಾ ಸೂಚಿತ ಅನುಮತಿಯೊಂದಿಗೆ, ಲೈಸೆನ್ಸಿನ ಯಾವುದೇ ನಿಬಂಧನೆಗಳು ಅಥವಾ ಷರತ್ತುಗಳ ಉಲ್ಲಂಘನೆಯನ್ನು ಎಸಗಿದರೆ;

(iii) ಲೈಸೆನ್ಸ್‌ಯುಕ್ತ ಮಾರಾಟಗಾರರು ಅಥವಾ ಇತರ ಲೈಸೆನ್ಸ್‌ಯುಕ್ತ ಇ-ವಾಣಿಜ್ಯ ವೇದಿಕೆ ಲೈಸೆನ್ಸನ್ನು ಹೊಂದಿದ್ದವರೊಂದಿಗೆ ಜೊತೆಯಾಗಿ ಲೈಸೆನ್ಸುದಾರನು, ಮಾರುಕಟ್ಟೆ ಪ್ರದೇಶದಲ್ಲಿ ಅಧಿಸೂಚಿತ ಕೃಷಿ ಉತ್ಪನ್ನದ ಮಾರಾಟವನ್ನು ಉದ್ದೇಶಪೂರ್ವಕಾಗಿ ನಿರ್ಬಂಧಿಸುವ, ಅಮಾನತ್ತುಪಡಿಸುವ ಅಥವಾ ನಿಲ್ಲಿಸುವ ಉದ್ದೇಶದೊಂದಿಗೆ ಮಾರುಕಟ್ಟೆ ಪ್ರಾಂಗಣಗಳಲ್ಲಿ ವ್ಯಾಪಾರ ಕಾರ್ಯಾಚರಣೆಗಳ ಮೇಲೆ ತತ್ಪರಿಣಾಮ ಹೊಂದಿರುವ ಯಾವುದೇ ಕಾರ್ಯವನ್ನು ಅಥವಾ ವೇದಿಕೆಯಲ್ಲಿ ಸಾಮಾನ್ಯ ವ್ಯವಹಾರ ನಡೆಸುವುದರಿಂದ ವಿಮುಖನಾಗುವಂತೆ ಮಾಡಿದರೆ;

(iv) ಲೈಸೆನ್ಸುದಾರನು ದಿವಾಳಿಯಾದರೆ ; ಮತ್ತು

(v) ಲೈಸೆನ್ಸುದಾರನು ನಿಯಮಿಸಬಹುದಾದಂಥ ಯಾವುದೇ ಅನರ್ಹತೆಯನ್ನು ಹೊಂದಿದರೆ:

ಪರಂತು ಲೈಸೆನ್ಸುದಾರನಿಗೆ ನೋಟೀಸನ್ನು ನೀಡಿದ ಹೊರತು ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**131ಎನ್. ಅಪೀಲು.-** ಕೃಷಿ ಮಾರುಕಟ್ಟೆ ನಿರ್ದೇಶಕನ ಆದೇಶದಿಂದ ಭಾದಿತನಾದ ಯಾರೇ ವ್ಯಕ್ತಿಯು ಈ ಕುರಿತು ನೀಡಲಾದ ಆದೇಶವನ್ನು ಸ್ವೀಕರಿಸಿದ ಮೂವತ್ತು ದಿನಗಳೊಳಗಾಗಿ ಕರ್ನಾಟಕ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲನ್ನು ಸಲ್ಲಿಸುವುದು.

**131ಒ. ವಿವಾದಗಳ ನಿರ್ವಹಣೆ.-** (1)ವೇದಿಕೆಯಲ್ಲಿ ಕೃಷಿ ಉತ್ಪನ್ನಗಳ ಮಾರಾಟಕ್ಕಾಗಿ ಲೈಸೆನ್ಸ್‌ಯುಕ್ತ ಮಾರಾಟಗಾರರಿಗೆ ಮಾಡಬೇಕಾದ ಪಾವತಿ, ಕಾರ್ಯಾಚರಣೆಯ ಅಧಿಕಾರ ವ್ಯಾಪ್ತಿ, ಕೃಷಿ ಉತ್ಪನ್ನಗಳ ತೂಕ, ಗುಣಮಟ್ಟ, ಬೆಲೆ, ದರಗಳು, ಶುಲ್ಕಗಳು ಇತ್ಯಾದಿಗಳ ಕುರಿತು ಇ-ವಾಣಿಜ್ಯ ವೇದಿಕೆ ಲೈಸೆನ್ಸುದಾರ, ವೇದಿಕೆಯಲ್ಲಿ ಕಾರ್ಯಾಚರಣೆ ಮಾಡಲು ಅನುಮತಿಸಲಾದ ಲೈಸೆನ್ಸುಯುಕ್ತ ಮಾರಾಟಗಾರ ಅಥವಾ ಸಂದರ್ಭಾನುಸಾರವಾಗಿ ವೇದಿಕೆಯಲ್ಲಿ ಉತ್ಪನ್ನಗಳನ್ನು ಕೊಳ್ಳುವ ಖರೀದಿದಾರರ ನಡುವಿನ ಯಾವುದೇ ವಿವಾದಕ್ಕಾಗಿ, ವಿವಾದವು ಉದ್ಭವಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅಗತ್ಯ ದಸ್ತಾವೇಜುಗಳೊಂದಿಗೆ ಕೃಷಿ ಮಾರುಕಟ್ಟೆ ನಿರ್ದೇಶಕನ ಮುಂದೆ ತಾನಾಗಿ ಅಥವಾ ಆತನ ಅಧಿಕೃತ ಪ್ರತಿನಿಧಿಯ ಮೂಲಕ ಲಿಖಿತದಲ್ಲಿ ದೂರನ್ನು ದಾಖಲಿಸತಕ್ಕದ್ದು.

(2) ಕೃಷಿ ಮಾರುಕಟ್ಟೆ ನಿರ್ದೇಶಕನು ದೂರನ್ನು ಸ್ವೀಕರಿಸಿದ ಮೇಲೆ, ಸಂಬಂಧಿತ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ಮತ್ತು ಅಗತ್ಯ ವಿಚಾರಣೆಯನ್ನು ಮಾಡಿದ ತರುವಾಯ ದೂರನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ವಿವಾದವನ್ನು ತೀರ್ಮಾನಿಸುವುದು.

**131ಪಿ. ಪ್ರಕರಣ 131-ಕೆ ಉಲ್ಲಂಘನೆಗಾಗಿ ದಂಡನೆ.-** 131-ಕೆ ಪ್ರಕರಣದ ಉಪಬಂಧಗಳನ್ನು ಯಾರೇ ಉಲ್ಲಂಘಿಸಿದಲ್ಲಿ, ಅಪರಾಧನಿರ್ಣಿತನಾದ ಮೇಲೆ, ಆರು ತಿಂಗಳುಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದೊಂದಿಗೆ ಅಥವಾ ಒಂದು ಲಕ್ಷ ರೂಪಾಯಿಗಳ ಜುಲ್ಮಾನೆಯೊಂದಿಗೆ ಅಥವಾ ಅವೆರೆಡರಿಂದಲೂ ದಂಡಿತನಾಗತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
**(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)**

ಈ ಮುಂದಿನವುಗಳಿಗಾಗಿ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ನ್ನು (1966ರ ಕರ್ನಾಟಕ ಅಧಿನಿಯಮ 27)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ,-

(1) 'ಇ-ವಾಣಿಜ್ಯ ವೇದಿಕೆ' ಮತ್ತು 'ಉಗ್ರಾಣ ಸೇವಾದಾತ' ಪದಗಳನ್ನು ಪರಿಭಾಷಿಸಲು;

(2) ಉಪ-ಮಾರುಕಟ್ಟೆ ಪ್ರಾಂಗಣ ಅಥವಾ ಮಾರುಕಟ್ಟೆ ಉಪ-ಪ್ರಾಂಗಣದಂತಹ ಮಾರುಕಟ್ಟೆ ಪ್ರದೇಶಕ್ಕೆ ಮಾರುಕಟ್ಟೆ ಸಮಿತಿಯ ಅಧಿಕಾರವ್ಯಾಪ್ತಿಯನ್ನು ವಿಸ್ತರಿಸಲು;

(3) ಉಗ್ರಾಣ ಸೇವಾದಾತನ ಜವಾಬ್ದಾರಿಯನ್ನು ನಿಗದಿಪಡಿಸಲು; ಮತ್ತು

(4) ಇ-ವಾಣಿಜ್ಯ ವೇದಿಕೆಯನ್ನು ಸ್ಥಾಪಿಸಲು ಮತ್ತು ಕೆಲವು ಇತರ ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತುಜ್ಞಾಪನ ಪತ್ರ

| | |
|---|---|
| ಖಂಡ 3 | 6ನೇ ಪ್ರಕರಣದ (2)ನೇ ಉಪಪ್ರಕರಣದ ಮೂರನೇ ಪರಂತುಕದ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ (i) ಉಪಖಂಡವು ಉಗ್ರಾಣ, ಹಗೇವು, ಶೀತಲ ಸಂಗ್ರಹ, ಪ್ಯಾಕ್ ಹೌಸ್‌ಗಳು, ಉಪ-ಮಾರುಕಟ್ಟೆ, ಮಾರುಕಟ್ಟೆ ಉಪ-ಪ್ರಾಂಗಣ ಅಥವಾ ಸಂದರ್ಭಾನುಸಾರವಾಗಿ ಉಪ-ಮಾರುಕಟ್ಟೆ ಪ್ರಾಂಗಣಗಳನ್ನು ಶುಚಿಗೊಳಿಸುವ, ಶ್ರೇಣೀಕರಣಗೊಳಿಸುವ ಮತ್ತು ಪ್ಯಾಕುಮಾಡುವ ಘಟಕಗಳಾಗಿ ಘೋಷಿಸುವ ಅಂಥ ವಿಧಾನವನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 5 | (1) ಈ ಖಂಡದ ಮೂಲಕ ಸೇರಿಸಲು ಉದ್ದೇಶಿಸಿರುವ 131ಕೆ ಪ್ರಕರಣದ,-<br>(i) (2)ನೇ ಉಪಖಂಡವು, ಇ-ವಾಣಿಜ್ಯ ವೇದಿಕೆಯನ್ನು ರಚಿಸುವುದಕ್ಕಾಗಿ ಲೈಸೆನ್ಸನ್ನು ಮಂಜೂರು ಮಾಡಲು ಅಂಥ ಷರತ್ತುಗಳು, ಅಂಥ ಶುಲ್ಕಗಳು ಮತ್ತು ಅಂಥ ಭದ್ರತಾ ಠೇವಣಿಯನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>(ii) (3)ನೇ ಉಪಖಂಡವು, ಕೃಷಿ ಮಾರುಕಟ್ಟೆ ನಿರ್ದೇಶಕನಿಗೆ, ಅಂಥ ಶುಲ್ಕ ಮತ್ತು ಭದ್ರತಾ ಠೇವಣಿಯೊಂದಿಗೆ ಅರ್ಜಿಯನ್ನು ಸಲ್ಲಿಸುವ ಅಂಥ ವಿಧಾನವನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>(2) ಈ ಖಂಡದ ಮೂಲಕ ಸೇರಿಸಲು ಉದ್ದೇಶಿಸಿರುವ 131ಎಂ ಪ್ರಕರಣದ (v) ಬಾಬುವು ಯಾವುದೇ ಅನರ್ಹತೆಯನ್ನು ಲೈಸೆನ್ಸುದಾರನು ಹೊಂದಿರುವ ವಿಧಾನವನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ವಾಡಿಕೆಯ ಸ್ವರೂಪದ್ದಾಗಿದೆ.

**ಶಿವಾನಂದ ಪಾಟೀಲ್**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ನಿರ್ದೇಶನಾಲಯ
ಹಾಗೂ ಸಹಕಾರದಿಂದ ಕೃಷಿ ಮಾರುಕಟ್ಟೆ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

# ಅನುಬಂಧ

## ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ಅಧಿನಿಯಮ, 1966

## (ಕರ್ನಾಟಕ ಅಧಿನಿಯಮ 1966ರ ಸಂಖ್ಯೆ 27)

## ಉದ್ಧೃತ ಭಾಗ

**XXX XXX XXX**

**2. ಪರಿಭಾಷೆಗಳು**.- **XXX XXX XXX**

(21) ``ಮಾರುಕಟ್ಟೆ ಕಾರ್ಯನಿರ್ವಾಹಕ'' ಅಥವಾ ``ಕಾರ್ಯನಿರ್ವಾಹಕ'' ಎಂಬುದರಲ್ಲಿ ದಲ್ಲಾಳಿ, ಕಮೀಷನ್ ಏಜೆಂಟ್, ರಫ್ತುದಾರ, ಜಿನ್ನರ್, ಆಮದುದಾರ, ಪ್ರೆಸ್ಸರ್, ಸಂಸ್ಕರಣಕಾರ, ದಾಸ್ತಾನುಗಾರ, ವ್ಯಾಪಾರಿ ಮತ್ತು ಮಾರುಕಟ್ಟೆಯ ಕಾರ್ಯನಿರ್ವಾಹಕನೆಂದು ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಘೋಷಿಸಬಹುದಾದಂಥ ಇತರ ವ್ಯಕ್ತಿ ಇವರು ಒಳಗೊಳ್ಳುತ್ತಾರೆ;

**XXX XXX XXX**

(37ಎ) ``ಚಿಲ್ಲರೆ ವ್ಯಾಪಾರಿ'' ಎಂದರೆ ಯಾವುದೇ ಒಂದು ಸಮಯಕ್ಕೆ ಎರಡು ಅಥವಾ ಹೆಚ್ಚಿನ ಬಗೆಯ ಕೃಷಿ ಉತ್ಪನ್ನಗಳು ಸೇರಿ ಒಟ್ಟು ಹದಿನೈದು ಕ್ವಿಂಟಾಲ್ ಮೀರದಂತೆ ಅಥವಾ ಒಂದೇ ಬಗೆಯ ಕೃಷಿ ಉತ್ಪನ್ನವು ಆರು ಕ್ವಿಂಟಾಲ್‌ಗೆ ಮೀರದಂತೆ ದಾಸ್ತಾನು ಇಟ್ಟುಕೊಂಡಿರುವ ವ್ಯಕ್ತಿ:

**XXX XXX XXX**

**6. ಮಾರುಕಟ್ಟೆಗಳು, ಮಾರುಕಟ್ಟೆ ಪ್ರಾಂಗಣಗಳು, ಮಾರುಕಟ್ಟೆ ಉಪಪ್ರಾಂಗಣಗಳು, ಉಪ ಮಾರುಕಟ್ಟೆಗಳು ಮತ್ತು ಉಪಮಾರುಕಟ್ಟೆ ಪ್ರಾಂಗಣಗಳು.-**

**XXX XXX XXX**

(2) (ಎ) ಕೃಷಿ ಮಾರುಕಟ್ಟೆ ನಿರ್ದೇಶಕನು, 4ನೇ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಅಧಿಸೂಚನೆಯ ಮೂಲಕ, ಮಾರುಕಟ್ಟೆ ಪ್ರದೇಶದಲ್ಲಿನ ಯಾವುದೇ ನಿರ್ದಿಷ್ಟ ಪ್ರದೇಶವನ್ನು ಮಾರುಕಟ್ಟೆ ಪ್ರದೇಶವೆಂದು ಘೋಷಿಸತಕ್ಕುದು ಮತ್ತು ಅವನು ಅದೇ ಅಧಿಸೂಚನೆಯ ಮೂಲಕ ಅಥವಾ ತರುವಾಯದ ಯಾವುದೇ ಅಧಿಸೂಚನೆಯ ಮೂಲಕ ಮಾರುಕಟ್ಟೆ ಪ್ರದೇಶದಲ್ಲಿನ ಯಾವುದೇ ಇತರ ನಿರ್ದಿಷ್ಟ ಪ್ರದೇಶವನ್ನು ಒಂದು ಉಪ ಮಾರುಕಟ್ಟೆ ಎಂದು ಘೋಷಿಸಬಹುದು.

**XXX XXX XXX**

ಅಲ್ಲದೇ ಪರಂತು, ಕೃಷಿ ಮಾರುಕಟ್ಟೆಯ ನಿರ್ದೇಶಕನು, ನಿಯಮಿಸಬಹುದಾದ ಅಂಥ ರೀತಿಯಲ್ಲಿ, ಉಪ ಮಾರುಕಟ್ಟೆ, ಮಾರುಕಟ್ಟೆ, ಉಪ ಪ್ರಾಂಗಣ ಅಥವಾ ಉಪ ಮಾರುಕಟ್ಟೆ ಪ್ರಾಂಗಣದಲ್ಲಿಯ ಉಗ್ರಾಣವನ್ನು ಘೋಷಿಸಬಹುದು.

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 300, 10ನೇ ಮಾರ್ಚ್ 2025

**KARNATAKA LEGISLATIVE COUNCIL**
**ONE HUNDRED AND FIFTY FIFTH SESSION**

# THE KARNATAKA AGRICULTURAL PRODUCE MARKETING (REGULATION AND DEVELOPMENT) (AMENDMENT) BILL, 2025

**(LA Bill No. 01 of 2025)**
**(As passed by the Karnataka Legislative Assembly)**

A Bill further to amend the Karnataka Agricultural Produce Marketing (Regulation and Development) Act, 1966.

Whereas it is expedient further to amend the Karnataka Agricultural Produce Marketing (Regulation and Development) Act, 1966 (Karnataka Act 27 of 1966) for the purposes hereinafter appearing;

Be it enacted by the Karnataka State Legislature in the seventy sixth year of the Republic of India as follows:-

**1. Short title and commencement.**- (1) This Act may be called the Karnataka Agricultural Produce Marketing (Regulation and Development) (Amendment) Act, 2025.

(2) It shall come into force at once.

**2. Amendment of section 2.-** In the Karnataka Agricultural Produce Marketing (Regulation and Development) Act, 1966 (Karnataka Act 27 of 1966) (hereinafter referred to as the Principal Act), in section 2,-

(i) after clause (13), the following shall be inserted, namely:-

**"(13-A) "E-commerce platform"** means an online platform for facilitating licensed traders under the Act to sell market fee suffered notified agricultural produce to the licensed retail traders in the market area for sale to consumers for domestic consumption and not for subsequent sale or processing and shall also mean an online platform for farmers to pay by using e-payment method".

(ii) in clause (21), after the word "trader" the words "warehouse service provider" shall be inserted;

(iii) in clause (37-A), after the words " quantity of notified agricultural produce" the words "and classify the retail trader for the purpose," shall be inserted;

(iv) after clause (50), the following shall be inserted, namely:-

**"(50-A)"Warehouse service provider"** means a person, firm, company who makes or provides services for buying and selling of notified agricultural produce in a notified warehouse and collects service charges for the same."

**3. Amendment of section 6.-** In the Principal Act, in section 6 in sub section (2),-

(i) for the third proviso, the following proviso shall be substituted, namely:-

"Provided also that, the Director of Agricultural Marketing may declare a warehouse, silos, cold storage, pack houses, cleaning, grading and packaging unit as sub-market, market sub-yard or sub-market yard as the case may be in such manner as may be prescribed.

(ii) after third proviso as so amended, the following shall be inserted namely:-

"Provided also that, all processing units licensed by the market committee which is outside the market yards and within the market area, shall be deemed as sub-market, market sub-yard or sub-market yard as the case may be for the purpose of regulation."

**4. Insertion of new section78-B.-**In the Principal Act, after section 78A, the following new section shall be inserted, namely:-

"**78-B. Responsibility of Warehouse service provider.-**(1) A warehouse service provider shall receive his service charge only from the buyer of the notified agricultural produce which shall not exceed five percent of the price for which such notified agricultural produce is sold in respect of fruits, vegetables, flowers and two percent in all other notified produce.

(2) A warehouse service provider,-

(i) shall arrange for the safe custody of the goods of the seller and storage of notified agricultural produce and adequately insure against fire, theft, flood, rain or any other natural calamities;

(ii) shall provide for fire fighting arrangements, electronic weighment and facilities for e-trading, assaying facilities, quality certification, display of prices of commodities in the markets and other facilities**to be** provided as notified by the **Director of Agricultural Marketing**; and

(iii) A warehouse service provider shall make arrangements for pledge loan facility.

(3) In case the payment of price is not made under section 78 of the Act, A warehouse service provider shall be liable to make additional payment at the rate of one percent per day of the total price of the notified agricultural produce payable to the seller within five days, failing which the declaration of the warehouse for the purpose of warehouse based sales shall be cancelled".

**5. Insertion of new Chapter XIII-D.-** After chapter XIII-C of the Principal Act, the following shall be inserted, namely:-

**"CHAPTER XIII-D**

**E-Commerce Platform**

**131-K. Establishment of E-Commerce Platform**.- (1) No person shall establish and run e-commerce platform for trading in notified agricultural produce without obtaining a license under this section.

(2) Subject to such conditions, and such fees and such security deposit as may be prescribed, the Director of Agricultural Marketing shall grant license to setup e-commerce platform for facilitating trading in the notified agricultural produce.

(3) Any person who desires to establish and run e-commerce platform may apply to the Director of Agricultural Marketing in such manner along with such fee and security deposit as may be prescribed.

(4) The e-commerce platform shall,-

(i) provide payment facility for notified agricultural produce traded by traders in the platform;

(ii) allow only the licensed traders licensed by the appropriate authority under the Act for registering with the e-commerce platform.

(iii) ensure transparency in operation, decision making related to entire trading operations taking place in the platform.

(iv) provide for collection of fees, charges etc., relating to registration, trading transactions taken place in the platform.

(v) maintain records in electronic format of all the transactions traded in the platform;

(vi) provide services relating to grading, quality certification and standardization of commodities, collateral financing, borrowing and other services required by the participants of the platform;

(vii) trade only in the market fee suffered goods offered for sale by the licensed traders and in case, contrary to the above takes place, the licensee of the platform has to pay the market fee applicable to the concerned market committee; and

(viii) provide the operational and working guidelines to the licensing authority and after approval of the same, function the platform accordingly.

**131-L.Reports of E-commerce Platform Licensee.-** The licensee shall maintain record of all the transactions taken place on the e-commerce platform in the electronic format and submit such periodical reports and returns at such times and in such forms as specified by the Director of Agricultural Marketing from time to time to the licensing authority or any officer authorized by him in this behalf.

**131-M.Power to cancel or suspend e-commerce license**.- The Director of Agricultural Marketing for reasons shall recorded in writing suspend or cancel e-commerce platform license granted by him in the following circumstances, namely:-

(i) if the license has been obtained through wilful misrepresentation or fraud;

(ii) if the license holder or any one acting on his behalf with his express or implied permission commits a breach of any of the terms or conditions of the license;

(iii) if the license holder in combination with licensed traders or other licensed e-commerce platform holders, commits any act or abstains from carrying normal business in the platform with an intention of willfully obstructing, suspending or stopping of marketing of notified agricultural produce in the market area which had a consequence on the business operations in the market yards.

(iv) if the license holder becomes an insolvent; and

(v) if the license holder incurs any disqualification in such manner as may be prescribed;

Provided that, no order shall be made without giving notice to the licensee.

**131-N. Appeal.-** Any person aggrieved by an order of the Director of Agricultural Marketing prefer an appeal to the Karnataka Appellate Tribunal within thirty days of receipt of the order communicated in this regard.

**131-O.Redressal of disputes**.- Any dispute between the e-commerce platform licensee, licensed trader permitted to operate in the platform or the buyer of the produce offered in the platform, as the case may be regarding payment to be made to the licensed traders for the sale of agricultural produce in the platform, jurisdiction of operation, weight of agricultural produce, quality, price, charges, fees etc., shall in writing file a complaint by himself or through his authorized representative before the Director of Agricultural Marketing within thirty days from the date of arising the dispute with necessary documents.

(2) The Director of Agricultural Marketing on receipt of the complaint, after giving an opportunity of being heard with the concerned parties and making necessary enquiry, decide the dispute within a period of sixty days from the date of receipt of the complaint.

**131-P. Penalty for contravention of section 131-K.-**Whoever contravenes the provisions of section 131-K shall, on conviction, shall punished with imprisonment for a term which may extend to six months or with a fine of rupees one lakh or with both.”

## STATEMENT OF OBJECTS AND REASONS

### (As appended to at the time of Introduction)

It is considered necessary to amend the Karnataka Agricultural Produce Marketing (Regulation and Development) Act, 1966 (Karnataka Act 27 of 1966), to,-

(1) define the words 'E-commerce platform' and 'warehouse service provider';

(2) extend the jurisdiction of the Market Committee to the Market Area such as sub-market yard or market-sub-yard;

(3) fix the responsibility of warehouse service provider; and

(4) establish E-commerce platform and certain other consequential amendments are also made.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**MEMORANDUM REGARDING DELEGATED LEGISLATION**

| | |
|---|---|
| **Clause 3:** | Sub-clause (i), proposes to substitute third proviso to sub-section (2) of section 6 empowers the Government to prescribe by rules such manner to declare warehouse, silos, cold storage, pack houses, cleaning, grading and packaging unit as sub-market, market sub-yard or sub-market yard as the case may be. |
| **Clause 5:** | (1) Section 131-K proposed to be inserted by this clause,-<br><br>(i) Sub-clause (2), empowers the State Government to prescribe by rules such conditions, and such fees and such security deposit to grant license to set up e-commerce platform.<br>(ii) Sub-clause (3), empowers the State Government to prescribe by rules in such manner along with such fee and security deposit may apply to the Director of Agricultural Marketing.<br>(2) Item (V) of section 131-M proposed to be inserted by this clause empowers the State Government to prescribe by rules such manner the license holder incurs any disqualification. |

The proposed delegation of Legislative power is normal in character.

**SHIVANAND PATIL**
Minister for Textiles, Sugarcane Development
and Directorate of Sugar and Agricultural
Marketing from Co-operation

**K.R. MAHALAKSHMI**
Secretary
Karnataka Legislative Council

**ANNEXURE**

**THE KARNATAKA AGRICULTURAL PRODUCE MARKETING (REGULATION AND DEVELOPMENT) ACT, 1966 (KARNATAKA ACT 27 OF 1966)**

**XXX XXX XXX**

**2. Definitions:-**

**XXX XXX XXX**

**(21)** "market functionary" or "functionary" includes a broker, a commission agent, an exporter, a ginner, an importer, a presser, a processor, a stockiest, a trader, and such other person as may be declared under the rules or the bye- laws to be a market functionary;

**XXX XXX XXX**

**(37A)** Retail Trader means a person who is engaged in retail sale of any notified agricultural produce on which market fee has already been levied and collected in the concerned market area and holds in stock at a time not exceeding such quantity of notified agricultural produce as the State Government may by notification specify from time to time. 37B) "rural

**XXX XXX XXX**

**6. Markets, market yards, market sub-yards, sub-markets and sub-market yards.-**

**XXX XXX XXX**

(2) (a) The Director of Agricultural Marketing shall, as soon as possible after the issue of a notification under section 4, by a notification, declare any specified area in the market area to be a market. He may also by the same notification or by any subsequent notification declare any other specified area 2 including a warehouse in the market area to be a sub-market.

**XXX XXX XXX**

Provided also that, the Director of Agricultural Marketing may declare a warehouse in a sub-market, market sub-yard or sub-market yard in such manner as may be prescribed.

**XXX XXX XXX**

Govt. Press, Vikasa Soudha, Bengalur, 10th Mar, 2025, P7, W.D. , Copies 300